This question paper consists of **11 pages**, including **31 questions.**

**Roll No.**
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

# KANNADA
# ಕನ್ನಡ
# (208)

**Code No. 50/S/A/K**

**Set A**

**Day and Date of Examination**..............................................................................
ಪರೀಕ್ಷೆಯ ದಿನ ಮತ್ತು ತಾರೀಖು

**Signature of Invigilators 1.** ..........................................
ಉಸ್ತುವಾರಿದಾರರ ರುಜು

**2.** ..........................................

**ಸಾಮಾನ್ಯ ಸೂಚನೆಗಳು :**

**1.** ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

**2.** ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

**3.** ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ **(A), (B), (C), (D)** ಯನ್ನು ಬರೆಯಬೇಕು.

**4.** ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

**5.** ನಿಮ್ಮ ಉತ್ತರಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

**6.** ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **50/S/A/K, Set A** ಉತ್ತರಪತ್ರಿಕೆಯಲ್ಲಿ ಬರೆಯಿರಿ.

# KANNADA

## ಕನ್ನಡ

## (208)

## NEW SYLLABUS

**ಸಮಯ : 3 ಗಂಟೆಗಳು ]** **[ ಗರಿಷ್ಠ ಅಂಕಗಳು : 100**

**ಸೂಚನೆಗಳು :** **(1)** ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೆ ಬರೆಯಿರಿ.

**(2)** ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

ಪ್ರಶ್ನೆಸಂಖ್ಯೆ **1** ರಿಂದ **11** ರವರೆಗೆ **4** ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿ.

**1.** ಹತ್ತು ಜನರ ಕ್ಷೇಮಕ್ಕಾಗಿ ಲೇಖಕರು ಒಬ್ಬಿಬ್ಬರು ಹಿರಿಯರಿಗೆ _______ ನಡೆದುಕೊಳ್ಳಬೇಕಾಯಿತು. **1**

(A) ಇಷ್ಟವಿರುವ ರೀತಿ (B) ಭಕ್ತಿಯಿಂದ

(C) ಇಷ್ಟವಿಲ್ಲದ ರೀತಿ (D) ಉದ್ಧಟತನದಿಂದ

**2.** ಕಡಲು ಪದದ ಸಮಾನಾರ್ಥಕ ಪದ _______ **1**

(A) ನದಿ (B) ಹಳ್ಳ

(C) ಸಮುದ್ರ (D) ಕೊಳ್ಳ

**3.** 'ಕೆರೆಯ ದಡದಲ್ಲಿ' ಲೇಖನವನ್ನು ಈ ಕೃತಿಯಿಂದ ಆರಿಸಿಕೊಳ್ಳಲಾಗಿದೆ. **1**

(A) ರಾಮಾಯಣದ ಕಥೆ (B) ಪರಿಸರದ ಕಥೆ

(C) ಆಧುನಿಕ ಕಥೆ (D) ಸಣ್ಣ ಕಥೆ

**4.** ರಾಜನ ಮಗನಿಗೆ 'ಮಾತ್ನಾಡುವ ಅಡಿಕೆ ನೆಗಾಡುವ ಎಲೆ' ಎಂಬ ಹುಡುಗಿಯರು ದೊರೆತದ್ದು **1**

(A) ರಾಕ್ಷಸರಿಂದ (B) ಕ್ಷೌರಕನಿಂದ

(C) ವಾದ್ಯದವರಿಂದ (D) ಮಂತ್ರಿಗಳಿಂದ

5. ಹೊತ್ತಿಗ್ಯಾಗ  ಬರಿ ಶಾಸ್ತ್ರದ _______ 1

(A) ಆಧಾರ (B) ಬಂದಾರ

(C) ಗುರುತು (D) ನೊಗಭಾರ

6. 'ಚಿಕಿತ್ಸೆಯನ್ನು' ಇದರಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು _______ 1

(A) ಪ್ರಥಮಾ (B) ಸಪ್ತಮಿ

(C) ದ್ವಿತೀಯಾ (D) ಚತುರ್ಥಿ

7. ಸ್ತುತಿ-ನಿಂದೆಗಳು ಬಂದಡೆ ಮನದಲಿ _______ ತಾಳದೆ 1

(A) ಕೋಪವ (B) ಸಂತಸವ

(C) ತಾಪವ (D) ದ್ವೇಷವ

8. ಕಾರಯ್ಯನ ಮಕ್ಕಳೇ ಇವರು ________ 1

(A) ನಗರವಾಸಿಗಳು (B) ಅರಣ್ಯವಾಸಿಗಳು

(C) ಸೋಲಿಗರು (D) ಬಿಲ್ಲಯ್ಯ

9. ಕುಲ ಕುಲ ಕುಲವೆಂದು _______ 1

(A) ಹೊಡೆದಾಡಿ (B) ಹೋರಾಡಿ

(C) ಹೊಡೆದಾಡದಿರಿ (D) ಸಾಹಸ ಮಾಡಿರಿ

10. 'ಚರಕ' ಬಡಕೂಲಿ ಹೆಣ್ಣುಮಕ್ಕಳಿಗೆ _______ 1

(A) ಭಾಗ್ಯಚಕ್ರ (B) ಕೈಚಕ್ರ

(C) ವಿಷ್ಣುಚಕ್ರ (D) ಅನಿಷ್ಟಚಕ್ರ

11. ಇದು ಅನುನಾಸಿಕ ಸಂಧಿಯ ಉದಾಹರಣೆಯಾಗಿದೆ. 1

(A) ಷಡಾನನ (B) ಕಾವ್ಯಾನಂದ

(C) ಗುರ್ವಾಜ್ಞೆ (D) ಷಣ್ಮಾಸ

12. ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

ಕನ್ನಡವು ಸಂಸ್ಕೃತ, ಹಿಂದಿ, ಮರಾಠಿ, ಗುಜರಾತಿಗಳ ಆರ್ಯನ್ ಭಾಷಾ ವರ್ಗಕ್ಕಿಂತ ಭಿನ್ನವಾದ ದ್ರಾವಿಡ ಭಾಷಾವಂಶಕ್ಕೆ ಸೇರಿದೆ. ಅದಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಆದರೂ ಕನ್ನಡ ಭಾಷೆಯು ಎಲ್ಲ ಭಾಷೆಗಳಿಂದಲೂ ತನಗೆ ಅಗತ್ಯವಾದ ಪದಗಳನ್ನು ಸ್ವೀಕರಿಸುತ್ತ ಬೆಳೆದಿದೆ. ಸಂಸ್ಕೃತದಿಂದ ಯಥೇಚ್ಛವಾಗಿ ಪದಗಳನ್ನು ಸ್ವೀಕರಿಸಿದರೂ ಅವು ಬಂದು ಕನ್ನಡದ ದೇಸಿ ಪದಗಳನ್ನು ಹಿಂದಕ್ಕೆ ಹಾಕಲಿಲ್ಲ. ಕನ್ನಡ ಭಾಷೆ ಸತ್ವವನ್ನು ಕಳೆದುಕೊಳ್ಳುವಷ್ಟು ಸಂಸ್ಕೃತಕ್ಕೆ ಮಾರುಹೋಗಲಿಲ್ಲ. ಸಂಸ್ಕೃತ ಪದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡೇ ಬಳಕೆಯಾಗಿವೆ. ಅಲ್ಲಿಂದಲೂ ಪ್ರಾಕೃತದಿಂದಲೂ ಬಂದ ತದ್ಭವಗಳಂತೂ ಕನ್ನಡ ದೇಶ್ಯ ಪದಗಳೇ ಎನ್ನುವಷ್ಟು ಕನ್ನಡ ನುಡಿಯೊಡನೆ ಸಮರಸವಾಗಿ ಬೆರೆತವು. ಹಿಂದಿನ ಕನ್ನಡ ಸಾಹಿತ್ಯವೂ ಅಷ್ಟೆ ; ಮಡಿವಂತಿಕೆಯನ್ನು ಇಟ್ಟುಕೊಳ್ಳದೆ, ಹಾಗೆಂದು ಉಳಿದ ಸಾಹಿತ್ಯಗಳ ಪ್ರಭಾವಕ್ಕೆ ತಾನು ಸಂಪೂರ್ಣವಾಗಿ ಶರಣಾಗದೆ, ಎಲ್ಲ ಸಾಹಿತ್ಯಗಳ ಪ್ರೇರಣೆ ಪ್ರಚೋದನೆಗಳನ್ನು ಸ್ವಾಗತಿಸಿ ಸ್ವತಂತ್ರ ಸಾಹಿತ್ಯವನ್ನು ಕನ್ನಡವು ಬೆಳೆಸಿಕೊಂಡಿತು. ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ಈ ಯಾವ ಪ್ರಕಾರವನ್ನು ತೆಗೆದುಕೊಂಡರೂ ಕನ್ನಡವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಪಂಪ, ರನ್ನ, ಕುಮಾರವ್ಯಾಸರು ಮಹಾಭಾರತದ ವಸ್ತುವನ್ನು ಆರಿಸಿಕೊಂಡಿದ್ದರೂ ಅವು ಕನ್ನಡ ನೆಲಕ್ಕೆ ಹೊಂದಿಕೊಂಡಿವೆ.

**ಪ್ರಶ್ನೆಗಳು :**

(1) ಇದು ಭಿನ್ನವಾದ ದ್ರಾವಿಡ ಭಾಷಾ ವಂಶಕ್ಕೆ ಸೇರಿದೆ. **1**

(A) ಕನ್ನಡ (B) ಸಂಸ್ಕೃತ
(C) ಹಿಂದಿ (D) ಗುಜರಾತಿ

(2) ಯಾವುದಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ ? **1**

(A) ಮರಾಠಿಗೆ (B) ಸಂಸ್ಕೃತಕ್ಕೆ
(C) ಉರ್ದು ಭಾಷೆಗೆ (D) ಕನ್ನಡ ಭಾಷೆಗೆ

(3) ಕನ್ನಡದ ದೇಸಿ ಪದಗಳನ್ನು ಯಾವುದು ಹಿಂದಕ್ಕೆ ಹಾಕಲಿಲ್ಲ ? **1**

(4) ಯಾವುವು ಕನ್ನಡ ನುಡಿಯೊಡನೆ ಸಮರಸವಾಗಿ ಬೆರೆತವು ? **2**

(5) ಕನ್ನಡದ ದೇಸಿ ಪದಗಳನ್ನು ಯಾವುದು ಹಿಂದಕ್ಕೆ ಹಾಕಲಿಲ್ಲ ? ಹೇಗೆ ? 2

(6) ಯಾವ ಸಾಹಿತ್ಯವು ಮಡಿವಂತಿಕೆಯನ್ನು ಇಟ್ಟುಕೊಂಡಿಲ್ಲ ? 1

(7) ಕನ್ನಡವು ಯಾವ ರೀತಿಯ ಸಾಹಿತ್ಯವನ್ನು ಬೆಳೆಸಿಕೊಂಡಿತು ? ಹೇಗೆ ? 2

(8) ಕನ್ನಡವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಹೇಗೆ ? 2

(9) ಈ ಗದ್ಯಭಾಗಕ್ಕೆ ತಲೆಬರಹ ಕೊಡಿ. 1

**13.** ಕೊಟ್ಟಿರುವ ಪದ್ಯಭಾಗವನ್ನು ಓದಿರಿ. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

ದೇವರು ರುಜು ಮಾಡಿದನು

ರಸವಶನಾಗುತ ಕವಿ ಅದ ನೋಡಿದನು

ಬಿತ್ತರದಾಗಸ ಹಿನ್ನೆಲೆಯಾಗಿರೆ

ಪರ್ವತದೆತ್ತರ ಸಾಲಾಗೆಸೆದಿರೆ

ಕಿಕ್ಕಿರಿದಡವಿಗಳಂಚಿನ ನಡುವೆ

ಮೆರೆದಿರೆ ಜಲಸುಂದರಿ ತುಂಗೆ

ದೇವರು ರುಜು ಮಾಡಿದನು

ರಸವಶನಾಗುತ ಕವಿ ಅದ ನೋಡಿದನು

ನದಿ ಹರಿದಿತ್ತು ; ಬನ ನಿಂತಿತ್ತು ;

ಬಾನ್ ನೀಲಿಯ ನಗೆ ಬೀರಿತ್ತು,

ನಿರ್ಜನ ದೇಶದ ನೀರವ ಕಾಲಕೆ

ಖಗರವ ಪುಲಕಂ ತೋರಿತ್ತು.

ಕುವೆಂಪು

**ಪ್ರಶ್ನೆಗಳು :**

(1) ರುಜು ಮಾಡಿದವರು ಯಾರು ? **1**

(A) ಮನುಷ್ಯ (B) ಕವಿ

(C) ದೇವರು (D) ನದಿ

(2) ಬಿತ್ತರದಾಗಸ ಹಿನ್ನೆಲೆಯಾಗಿರೆ... **1**

ಆಗಸ -- ಇದರ ತತ್ಸಮ ರೂಪ _______

(3) ನದಿ ಹರಿದಿತ್ತು ; ಬನ ನಿಂತಿತ್ತು **2**

ನದಿ ಮತ್ತು ಬನಗಳ ಉಪಯೋಗ ತಿಳಿಸಿರಿ. (2-3 ವಾಕ್ಯಗಳಲ್ಲಿ)

(4) ನಿರ್ಜನ -- ನೀರವ **2**

ಈ ಪದಗಳ ಅರ್ಥ ವ್ಯತ್ಯಾಸ ಬರೆಯಿರಿ.

**14.** ಗರತಿ ಭೂಮಿತಾಯಿಯನ್ನು ಯಾವಾಗ ನೆನೆಯುತ್ತಾಳೆ ? **1**

**15.** ವಿಜಯಳು ಅಣ್ಣನನ್ನು ಯಾವುದರ ಬಗ್ಗೆ ಒಪ್ಪಿಗೆ ಕೇಳಿದಳು ? **1**

**16.** ಕಂಪ್ಯೂಟರ್‌ಗಳು ಹೇಗೆ ವಿಕಾಸಗೊಂಡು ಬೆಳೆದಿವೆ ? **1**

**17.** ಹಸುವಿನಿಂದ ಸತ್ತವರು ಯಾರು ? **1**

**18.** (A) ಹುಯೆನ್ ತ್ಸಾಂಗ್ ಎಷ್ಟು ವರ್ಷಗಳ ಕಾಲ ಇಂಡಿಯಾ ದೇಶದಲ್ಲಿದ್ದನು ? **1**

(B) ಯುನಾನಿ, ಅಲೋಪತಿ, ಹೋಮಿಯೋಪತಿ, ಆಸ್ಪತ್ರೆ - ಇಲ್ಲಿ ಗುಂಪಿಗೆ ಸೇರದ ಪದ ______ **1**

**19.** ಕೆಳಗಿನವುಗಳಿಗೆ ಉತ್ತರಿಸಿರಿ.

(A) ಇಲ್ಲಿರುವ ಪದಗಳಲ್ಲಿ ಯಾವುದಾದರೂ **ಎರಡನ್ನು** ಬಿಡಿಸಿ ಬರೆಯಿರಿ. **2**

(1) ವಿದ್ಯಾರ್ಥಿ

(2) ದೇವಾಸುರ

(3) ಸುರೇಂದ್ರ

**ಅಥವಾ**

ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ.

(1) ಏಕ + ಏಕ

(2) ಸಕಲ + ಐಶ್ವರ್ಯ

(3) ಪಿತೃ + ಅರ್ಥ

(B) 'ಇಗ' ಪ್ರತ್ಯಯ ಸೇರಿಸಿ **2** ಶಬ್ದಗಳನ್ನು ರಚಿಸಿರಿ. **2**

**ಅಥವಾ**

'ತನಕ' ಅವ್ಯಯವನ್ನು ಸೇರಿಸಿ **2 ಪದಗಳನ್ನು** ತಯಾರಿಸಿರಿ.

(C) ಕೊಟ್ಟಿರುವ ವಾಕ್ಯಗಳಲ್ಲಿ **ಗೆರೆ** ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ. **2**

(1) <u>ಆಕಾಶ</u>ದಲ್ಲಿ ನಕ್ಷತ್ರಗಳು ಹೊಳೆಯುತ್ತವೆ

(2) ಕ್ರೂರ ಪ್ರಾಣಿಗಳು <u>ಕಾಡು</u>ಗಳಲ್ಲಿ ವಾಸಿಸುತ್ತವೆ

**ಅಥವಾ**

ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ **ಎರಡಕ್ಕೆ** ಒಂದೊಂದು ವಿರುದ್ಧ ಪದ ಬರೆಯಿರಿ.

(1) ಮೇಲೆ

(2) ಉಕ್ಕು

(3) ಸ್ಪರ್ಧೆ

**20.** ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಬಳಸಿರಿ. **2**

(1) ಕಸಿವಿಸಿಯಾಗು

(2) ನಾಮ ಹಾಕು

(3) ಕೈಕೊಡು

**21.** 'ತ್ರಿನೇತ್ರ' ಈ ಪದವು ಯಾವ ಸಮಾಸದ ನಿಯಮದಲ್ಲಿ ಬರುತ್ತದೆ ? **1**

**22.** ಕಥಾನಾಯಕನ ತಂದೆಯ ಗುಣ ಸ್ವಭಾವವನ್ನು ತಿಳಿಸಿರಿ. **4**

**23.** ಸವಿತಾರ ಪ್ರಕಾರ ಪ್ರೀತಿ ಎಂದರೇನು ? ವಿವರಿಸಿರಿ. **5**

**24.** ಸೀತೆ-ಮಂಡೋದರಿಯರ ಪೂಜಾ ಪ್ರಸಂಗವನ್ನು ಬರೆಯಿರಿ. **5**

**ಅಥವಾ**

ಪಂಪ ಬನವಾಸಿಯಲ್ಲಿ ಪಂಚೇಂದ್ರಿಯಗಳಿಗೆ ಸುಖ ಕೊಡುವ ಅಂಶಗಳನ್ನು ಹೇಗೆ ವ್ಯಕ್ತಪಡಿಸಿದ್ದಾನೆ ?

**25.** ಕೊಟ್ಟಿರುವ ಪದಗಳಲ್ಲಿ ಯಾವುದಾದರೂ **ಎರಡಕ್ಕೆ ಎರಡು ಶಬ್ದಗಳನ್ನು** ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬಳಸಿರಿ. **2 + 2 = 4**

(A) ಮಾನ / ಪಾನ

(B) ಮರೆ / ಮೊರೆ

(C) ವಾಸ್ತು / ವಾಸ್ತವ

**26.** ಬೆಂಗಳೂರು ಷೋರೂಂ ಒಂದರಲ್ಲಿ ಮಾರಾಟವಾದ ಟ್ರಕ್ಕುಗಳ ಸಂಖ್ಯೆ ಕೆಳಗೆ ಇದೆ. ಅದರ ಸಹಾಯದಿಂದ ಏಕ ರೇಖಾಚಿತ್ರ ರಚಿಸಿರಿ. **5**

| **ವರ್ಷ** | 2001 | 2002 | 2003 | 2004 | 2005 | 2006 | 2007 | 2008 | 2009 | 2010 |
|---|---|---|---|---|---|---|---|---|---|---|
| **ಮಾರಾಟವಾದ ಟ್ರಕ್ಕುಗಳು** | 19 | 24 | 34 | 36 | 44 | 47 | 49 | 60 | 85 | 95 |

**ಅಥವಾ**

ನೀವು ಕಮಲಾಪತಿ ಬೆಂಗಳೂರಿನವರು, ನಿಮ್ಮ ಸ್ನೇಹಿತ ರಮಾಕಾಂತ ಮೈಸೂರು ಇವರಿಗೆ 1,000 ರೂಪಾಯಿಗಳನ್ನು ಕಳುಹಿಸಿಕೊಡಲು ಮನಿಆರ್ಡರ್ ಅರ್ಜಿ ಭರ್ತಿ ಮಾಡಿರಿ.

ಅವರಿಗೆ

ಅಂಚೆ ಮನುಷ್ಯ

ಅಂಚೆ ಕಛೇರಿ ___________

ಪಿನ್ ಕೋಡ್ __________

---

ಭಾರತದ ಮನಿಆರ್ಡರ್

ಸಂದಾಯಿಸಿದ ಹಣ (ಅಕ್ಷರಗಳಲ್ಲಿ) _______________________

ಸಂದಾಯಿಸಿದ ಹಣ (ಸಂಖ್ಯೆಗಳಲ್ಲಿ) ___________

ಅವರಿಗೆ (ಪಡೆಯುವವರು)

___________

___________

___________

ಪಿನ್ ಕೋಡ್ _________

ದಿನಾಂಕ :

ಕಳುಹಿಸುವವರ ಸಹಿ ___________

---

ಎಂ.ಓ.ನಂ. _________

ಅಂಚೆ-ಇಲಾಖಾ ಗುರುತಿನ ಪತ್ರ

ದಿನಾಂಕ : ___________

ಸಂದಾಯಿಸಿದ ಅಂಚೆಯ ಹೆಸರು

________________________

ಹಣ ಕಳುಹಿಸುವವರ ಪೂರ್ಣ ವಿಳಾಸ

____________________________

____________________________

____________________________

---

ಸಂಪರ್ಕಕ್ಕಾಗಿ :

____________________________

____________________________

ನಿಮ್ಮ ಪ್ರೀತಿಯ

_____________________

**27.** ಹುಯೆನ್-ತ್ಸಾಂಗ್ ಭಾರತದಿಂದ ಯಾವ ಅನರ್ಘ್ಯ ನಿಧಿಗಳನ್ನು ತೆಗೆದುಕೊಂಡು ಹೋಗಿದ್ದನು ? ವಿವರಿಸಿರಿ. **5**

**28.** ಈ ವಾಕ್ಯಗಳನ್ನು ಓದಿ, ನಿರ್ದೇಶನದಂತೆ ಉತ್ತರಿಸಿರಿ. **1 × 5 = 5**

(1) ಕಾಡುನ್ನು ರಕ್ಷಿಸವುದು ನಮ ಕರ್ತವ.

(ಶುದ್ಧ ರೂಪದಲ್ಲಿ ಬರೆಯಿರಿ)

(2) ಜಿಂಕೆ ಬಾಯಾರಿ ನೀರು ಕುಡಿಯಿತು ಃ ನೀರು, ಇದರ ಬಹುವಚನ ರೂಪ ___________

(3) ರಾಜ-ಮಹಾರಾಜ ಃ ಜೋಡಿಪದ ಃ ಃ ಡವಡವ ಃ ___________

(4) ಆಹಾ ಈ ಗೋಳಗುಮ್ಮಟ ಎಷ್ಟೊಂದು ಎತ್ತರವಾಗಿದೆ ___________

(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

(5) ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವನು.

(ಇದನ್ನು ಭೂತಕಾಲಕ್ಕೆ ಪರಿವರ್ತಿಸಿ)

**29.** ನೀವು ಸಂಪೂರ್ಣ | ವೆಂಕಟೇಶ ಬಸವೇಶ್ವರ ವಿದ್ಯಾಲಯ ಬಾಗಲಕೋಟೆಯವರು ಎಂದು ಭಾವಿಸಿ, ಸ್ವಪ್ನ ಪುಸ್ತಕಾಲಯ ಮೈಸೂರು, ಮಾಲಿಕರಿಗೆ ಒಂದು ಪತ್ರ ಬರೆಯಿರಿ. **7**

(ರಾಮಾಯಣ ಮಹಾಕಾವ್ಯವನ್ನು ಕಳುಹಿಸಿಕೊಡಲು ಕೋರಿ)

**ಅಥವಾ**

ಶಿವಮೊಗ್ಗ ಖಾಸಗಿ ವಸತಿ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ಮೇಘಶ್ರೀ | ರಂಜಿತ ಎಂದು ಭಾವಿಸಿಕೊಂಡು ಜಯನಗರ, ಬೆಂಗಳೂರು. ಇಲ್ಲಿರುವ ನಿಮ್ಮ ಅಕ್ಕನಿಗೆ ಕ್ರೀಡೋತ್ಸವಕ್ಕೆ ಆಹ್ವಾನಿಸುತ್ತಾ ಒಂದು ಪತ್ರ ಬರೆಯಿರಿ.

**30.** ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು **50** ಶಬ್ದಗಳಿಗೆ ಮಿಕ್ಕದಂತೆ ಬರೆಯಿರಿ. **5**

(1) ದುಡಿಮೆಯೇ ದೇವರು.

(2) ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು.

(3) ಕುಣಿಲಾರದ ಹೆಣ್ಣು ನೆಲ ಡೊಂಕು ಅಂದ್ಳು.

**31.** ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. **10**

(1) ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ

(2) ಪರಿಸರ ಮಾಲಿನ್ಯ

(3) ಜನಸಂಖ್ಯಾ ನಿವಾರಣೆ